ದಿವಾಳಿಯಾದ ಡಿಕ್ರೀ ದೇಣೇದಾರ ಚಿಕ್ಕ ಬಳ್ಳಾಪುರದಲ್ಲಿರತಕ್ಕ ಬ್ಯಾಡರ ದೊಡ್ಡ ತಿಮ್ಮರಾಯನ ವಿಷಯದಲ್ಲಿ—
ಸ್ಯ 1890ನೇ ಇಸವಿ ದಿವಾಳೀ ಕೇಸ್ ನಂಬರ್ 426.

ಹುಕ್ಕುಂ

ಮೇಲ್ಕಂಡ ದೊಡ್ಡ ತಿಮ್ಮರಾಯನು ನಿರ್ಬಂಧದಿಂದ ಖುಲಾಸೆ ಯಾಗಬೇಕೆಂದು ಕೊಟ್ಟ ಅರ್ಜಿ ಅಂಕವು ಸಬ್ ಜಡ್ಜೀರಾದ ಮೆಸ್ಟರ್ ಎಲ್. ಅನಂತಸ್ವಾಮಿರಾಯರವರ ರೂಬರೂ ಅರ್ಜೀದಾರನಾದ ದೊಡ್ಡ ತಿಮ್ಮರಾಯನ್ನ ಖುದ್ದಾಗಿ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು, ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿ ಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿಹೋದರು, ಯಾರಂದರೆ—ಯಾರುಸ್ನೂ ಹಾಜರಾಗಲಿಲ್ಲ.

ಸಿವಿಲ್ ಪ್ರೊಸಿಡ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ದೊಡ್ಡ ತಿಮ್ಮರಾಯನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳಿಯಾದವನನ್ನ ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗೀರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನ ನಿಖಾಲಸ್ ಮಾಡಲಾಗಿರುತ್ತೆ ಯಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ಯ1890ನೇ ಇಸವಿ ಆಗಸ್ಟು ತಿಂಗಳು 8ನೇ ತಾರೀಖಿನೆಲ್ಲಿ ಈ ಕೋರ್ಟು ಮೊಹರು ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು, ಅಥವಾ ದಾವಾದಾರ, ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಸೊಬಲಗು.			ಯಾವಾಗ ದೇಣೇ ಆಗುವುದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀಯೇನಾದರೂ ಇದ್ದರೆ.	ರೂ. ಷ
1	ಚಿಕ್ಕ ಬಳ್ಳಾಪುರದಲ್ಲಿರತಕ್ಕ ಸರಾಫ ಸುಂಡಪ್ಪ ..	25	0	0	..	ಡಿಕ್ರೀ ಬಾಬತು	
2	ಸದರೀ ಗ್ರಾಮದಲ್ಲಿರತಕ್ಕ ಜವಳೀ ಸುಬ್ಬಾಶಾಸ್ತ್ರಿ ..	45	0	0	..	ಡಿಟೋ	
3	ಸದರೀ ಗ್ರಾಮದಲ್ಲಿರತಕ್ಕ ವೋಲೆಟಿ ದೊಡ್ಡ ನರಸುಂಮಯ್ಯ ..	20	0	0	..	ಡಿಟೋ	
4	ಚಿಕ್ಕ ಬಳ್ಳಾಪುರದಲ್ಲಿರತಕ್ಕ ನಗರ್ತರ ನಂಜಪ್ಪ	20	0	0	..	ಡಿಟೋ	
5	ಚಿಕ್ಕ ಬಳ್ಳಾಪುರದ ತಾಲ್ಲೂಕು ಜಾತ್ತೆಪುರದಲ್ಲಿರತಕ್ಕ ನರಸಿಂಹ್ಮನಾಯಿಕ ..	80	0	0	..	ಮನೇ ಆಧಾರ ಪತ್ರದ ಬಾಬತು	
6	ಚಿಕ್ಕ ಬಳ್ಳಾಪುರದಲ್ಲಿರತಕ್ಕ ತಾವೊಯದೆ ಸುಬ್ಬಣ್ಣ.	45	0	0	ಸುಮಾರು ಒಂದು ವರುಷ	ಪತ್ರದ ಬಾಬತು	
7	ಚಿಕ್ಕ ಬಳ್ಳಾಪುರದ ಅದಾಲತ್ತು ಬ್ಯಾಂಕ್ ..	5	0	0	ಡಿಟೋ	ಪ್ರಾಂಸರೀ ಬಾಬತು	
8	ಚಿಕ್ಕ ಬಳ್ಳಾಪುರದ ಶುಭಾದಿಕರ್ಮ ಸಹಾಯ್ಯ ಧನಾಭಿವೃದ್ಧೀ ಬ್ಯಾಂಕ್ ..	5	0	0	ಸುಮಾರು ಯಿರಡುವರುಷ	ಪ್ರಾಂಸರೀ ಬಾಬತು	
	ಜುಮ್ಲಾ	245	0	0			

ಎಲ್. ಅನಂತಸ್ವಾಮಿರಾವ್,
ಸಬ್ ಜಡ್ಜ್.

ಮೈಸೂರು ಸಬ್ ಜಡ್ಜೀಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಕಿಲ್ಲೆಯಲ್ಲಿ ಬಾಳೇ ಅರಸಿನವರ ಲಾಯದಲ್ಲಿರುವ ರಂಗಂಣನ ವಿಷಯದಲ್ಲಿ—

ಸ್ಯ 1890ನೇ ಇಸವಿ ದಿವಾಳೀ ಕೇಸ್ ನಂಬರ್ 242.

ಹುಕುಂ

ಮೇಲ್ಕಂಡ ರಂಗಂಣನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಅರ್ಜೀ ಅಂಕವು ಈ ಕೋರ್ಟು ರೂಬರೂ ಅರ್ಜೀದಾರನಾದ ರಂಗಂಣನ ಪರವಾಗಿ 1ನೇ ಗ್ರೇಡ್ ಪ್ಲೀಡರ್ ನರಸಿಂಗರಾಯರನ್ನು ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರು, ತಮಗೆ ಈ ದರ್ಯಾಫ್ತೀ ನೋಟೀಸ್ ಜಾರೀಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುವದಕ್ಕೆ ತಪ್ಪಿ ಹೋದರು, ಯಾರಂದರೆ—1ನೇ ಮೈಸೂರು ರಾಜಧಾನೀ ಬ್ಯಾಂಕ್ ಏಜಂಟ್, 2ನೇ ಮೈಸೂರು ಜಗ್ಗಮೋಹನ ಬ್ಯಾಂಕ್ ಏಜಂಟ್.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ರಂಗೇಗೌಡನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನನ್ನು ನಿರ್ಬಂಧದಿಂದ ವಿಮೋಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗಾತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಇಸ್ತರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸ್ 1890ನೇ ಇಸವಿ ನವಂಬರ್ 12ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಸಿ ಕೊಡಲ್ಪಟ್ಟಿತು.

ಸಾಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಯಬಂದ ಅವರುಗಳ ವಾಸಸ್ಥಳ.	ಹೊಣಲಗ್ಗು.	ಬಾಕಿ ಪೈಕಿ ಮಾಫೀದಾದದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿ ಫಲ ಮತ್ತು ಗಿರ್ವಿಯೇನಾದರೂ ಇದ್ದರೆ.	ಟಿಪ್ಪಣಿ.
1	ಮೈಸೂರು ರಾಜಧಾನಿ ಬ್ಯಾಂಕ್ ಪಿಜಂಟರು ..	50 0 0	..	ಡಿಕರೀ	
2	ಮೈಸೂರು ಜಗನ್ಮೋಹನ ಬ್ಯಾಂಕ್ ಪಿಜಂಟರು.	164 10 4	..	ಡಿಟೋ	
		214 10 4			

ಎಂ. ರಾಮುಸ್ವಾಮೈಯ್ಯರ್,
ಸಬ್ ಜಡ್ಜ್.

ನೋಟಿಫಿಕೇಷನ್.

1ನೇ ಸೆಪ್ಟಂಬರ್ 1890.

ಈ ಕೆಳಗೆ ನಮೂದು ಮಾಡಲ್ಪಟ್ಟಿರುವ ಆನೆಯು ಮಾರಲ್ಪಡುತ್ತದೆ. ಆದ್ದರಿಂದ ಈ ಕೆಳಗೆ ರುಜು ಮಾಡಿರುವವರಿಗೆ ಕೂಡ್ಲೇ ಬರದುಕೊಳ್ಳತಕ್ಕದ್ದು. ಈ ಆನೆಯನ್ನು ಮೈಸೂರು ತಾಲ್ಲೂಕು ಚಟ್ಟನಹಳ್ಳಿ ಯಲ್ಲಾಗಲಿ ಅಥವಾ ಹೆಗ್ಗಡದೇವನ ಕೋಟೆ ತಾಲ್ಲೂಕು ಹಂಪಾಪುರ ಅಥವಾ ಕಾರಾಪುರದಲ್ಲಾಗಲಿ ನೋಡಬಹುದು.

ಆನೆ ಹೆಸರು.	ಜಾತಿ.	ಯತ್ತರ. ಅಡಿ.	ಅಂಗಲ	ಹಿಡಿಯಲ್ಪಟ್ಟ ತಾರೀಖು.
ಕಲ್ಯಾಣಿ	ಹೆಣ್ಣು	7	4	28—6—86.

ಷರಾ.—ಈ ಆನೆಯು ಚನ್ನಾಗಿ ತಯಾರ್ಮಾಡಲ್ಪಟ್ಟಿದೆ ಮತ್ತು ವೊಳ್ಳೇ ಆರೋಗ್ಯ ಸ್ಥಿತಿಯಲ್ಲಿದೆ. ಈ ಆನೆಯು 1887ನೇ ಇಸವಿ ಲಾಗಾಯತು ಹೊಸ ಆನೆಗಳನ್ನು ತಯಾರ್ಮಾಡಲು ವುಪಯೋಗಿಸಲ್ಪಡುತ್ತಾ ಇದೆ.

ಬಿ. ರಾಮುಸ್ವಾಮಿ ಐಯ್ಯರ್,
ಅಸಿಸ್ಟೆಂಟ್ ಕನ್ಸರ್ವೇಟರ್ ಆಫ್ ಮೈಸೂರ್.

ನಗರ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 156.

ವ್ಯತಪಟ್ಟ ರಾಚಪ್ಪನವರ ಆಸ್ತೀ ವಿಷಯದಲ್ಲಿ—

ಅರ್ಜೀದಾರಳು ಗುರುಶಾಂತಮ್ಮನು, ವ್ಯತಪಟ್ಟ ಸದರೀ ರಾಚಪ್ಪನವರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಶಿಕಾರಿಪುರ ಸ್ಥಳದ ಗುರುಶಾಂತಮ್ಮನು ಶಿಕಾರಿಪುರ ತಾಲ್ಲೂಕು ಬೆಳಂದೂರು ಮಾಗಣಿ ವಸಂತಿ ವಾಸಸ್ಥರಾಗಿ ವ್ಯತಪಟ್ಟ ರಾಚಪ್ಪನವರ ಜಿಂದಗಿ ಬಗ್ಯಾಗಿ ಖರತಕ್ಕ (1,000—0—0) ರೂಪಾಯಿ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ನೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಗುರುಶಾಂತಮ್ಮನ ಅರ್ಜಿಯನ್ನು 1890ನೇ ಇಸವಿ ಡಿಸಂಬರ್ ತಿಂಗಳು ತಾರೀಖು 19ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವ್ಯತಪಟ್ಟ ರಾಚಪ್ಪನವರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1890ನೇ ಇಸವಿ ನವಂಬರ್ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್‌ನಿಸಿ ನಮ್ಮ ದಸ್ತಖತ್ತೊಡನೆ ಕೋಣಾಗಿದೆ.

ಸಿ. ಕ್ರೈಸ್,
ಡಿಸ್ಟ್ರಿಕ್ಟ್ ಜಡ್ಜ್.